MANGALORE
THE HINDU • MONDAY, DECEMBER 24, 2012

CLASSIFIEDS MART Page 5
More Regional Advertisements: Page 6

Udupi Yesterday 34/21 | Dharmasthala Yesterday 33/21 | Mangalore Yest 32/21
Conditions/max temp/min temp in Celsius

# 'All communities have deficiencies'

Special Correspondent

**MANGALORE:** Members of the minority community should stop thinking that they are being discriminated against, said Khaleel Ahmed, Chairman, Karnataka Zakath and Charitable Trust (KZCT). He was speaking at a programme where the trust distributed scholarships to poor and meritorious students in the city on Sunday.




*Khaleel Ahmed, Chairman, Karnataka Zakat and Charitable Trust, addressing a gathering of students at a programme got up to give away scholarships to meritorious students in Mangalore on Sunday.*– PHOTO: H.S. MANJUNATH

Discrimination is in the minds of people and they should banish the thought from their minds. Instead, they should work hard and adopt a positive outlook, he told the audience, which consisted mainly of students. "Discrimination is there everywhere, in every community, it is a human trait"....this (the thought of being discriminated against) has to stop. Put your best foot forward, apply for jobs, there is no discrimination," he said.

Mr. Ahmed said there were leading businesses in India that were owned and run by people from minority communities. He named at least six companies from automobile, pharmaceutical, and cosmetics sectors (Tata, Ranbaxy, Cipla, Himalaya, Wockhardt, and Hamdard). In business, a businessman wants competent people and his aim was to have a profitable business. "There is ample opportunity to those who work hard and destiny will come forward to help you," he said. The Constitution guaranteed equality regardless of caste or creed. The community might face deficiencies and problems but it was not limited to it. It was the same with other communities too. "We are not alone," he said.

Instead of criticising and complaining about the government's acts of commission or ommission, people from the community should work on their own (that is, without expecting the government to do everything). "The government has too many priorities," he said.

At the event, 2,500 students belonging to different communities, got scholarships from the KZCT, which works in 13 districts of Karnataka. Of them, 64 students had secured more than 90 per cent.

While the money for the scholarships was sourced from donations, affluent people could do more to support the cause so that more people could benefit, he said.

Mr. Ahmed said that The Hyderabad Zakath and Charitable Trust was set up with the objective of spending zakath money on the education of poor Muslims enabling recipients to study and make a demonstrable change in their lives. "It was a revolutionary thought," he said. Its founder, Giyasuddin Babukhan, was criticised by many saying he could not spend the money for education. Traditional recipients of the money were people who run "madrassas".

Ummer Singh from Puttur, who scored 95 per cent, said he was studying to become a chartered accountant. Ilham Sheikh, with 94 per cent, said she was studying PCMB while Swati, who had scored 96 per cent, said she was studying for CA and doing her B.Com.

Mr. Ahmed, who cofounded Shanta Biotech and been executive director for 15 years, is a resident of Mumbai. His family is originally from Punaroor, near Kinnigoli. He said boys should not give dowry and girls must refuse to marry men who seek dowry. They must mix with people of other communities, he said.

ವಿಜಯವಾಣಿ
MANGALORE

2 ಸೋಮವಾರ 24 ಡಿಸೆಂಬರ್ 2012

ಮಂಗಳೂರು ಲೋಕಲ್ ಎಕ್ಸ್‌ಪ್ರೆಸ್

# ಝಕಾತ್ ಟ್ರಸ್ಟ್‌ನಿಂದ ವಿದ್ಯಾರ್ಥಿ ವೇತನ ವಿತರಣೆ

**ಮಂಗಳೂರು:** ಕರ್ನಾಟಕ ಝಕಾತ್ ಎಂಡ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ನಗರದಲ್ಲಿ ಸುಮಾರು 2500 ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು.

ಟ್ರಸ್ಟ್ ಅಧ್ಯಕ್ಷ ಖಲೀಲ್ ಅಹ್ಮದ್ ಮಾತನಾಡಿ, ವಿದ್ಯಾರ್ಥಿಗಳು ವರದಕ್ಷಿಣೆ ರಹಿತ ಸರಳ ವಿವಾಹ, ಕೋಮು ಸೌಹಾರ್ದ ಸ್ಥಾಪನೆ ಮೂಲಕ ನೈತಿಕ, ಮಾನವೀಯ ಸಮಾಜ ನಿರ್ಮಾಣದ ಪ್ರತಿಜ್ಞೆ ಮಾಡಬೇಕು ಎಂದು ಕರೆ ಕೊಟ್ಟರು.

ಈ ವರ್ಷ ರಾಜ್ಯದ 13 ಜಿಲ್ಲೆಯ 7000 ವಿದ್ಯಾರ್ಥಿಗಳಿಗೆ 3.5 ಕೋಟಿ ರೂ. ವಿದ್ಯಾರ್ಥಿ ವೇತನ ವಿತರಿಸಲಾಗುತ್ತಿದೆ. ಸರ್ಕಾರಿ ಶಾಲೆಯಲ್ಲಿ ಕಲಿತ ಬಡತನದ ಹಿನ್ನೆಲೆಯ 170 ಮಂದಿ ಶೇ. 90ಕ್ಕಿಂತ ಹೆಚ್ಚು ಅಂಕ ಪಡೆದಿರುವುದು ಹೆಮ್ಮೆಯ ಸಂಗತಿ ಎಂದರು.

ನ್ಯಾ.ಸಾಚಾರ್ ಸಮಿತಿ ಅಧ್ಯಯನ ನಡೆಸಿ ಮುಸ್ಲಿಮರ ಸ್ಥಿತಿ ದಲಿತರಿಂದಲೂ ಕೆಳಮಟ್ಟದಲ್ಲಿದೆ ಎಂದು ವರದಿ ನೀಡಿತ್ತು. ಬಳಿಕ ವರದಿ ಬಗ್ಗೆ ಚರ್ಚೆ- ಸಂವಾದಕ್ಕೆ ಸುಮಾರು 50 ಕೋಟಿ ರೂ. ಖರ್ಚು ಮಾಡಲಾಯಿತು. ಅದೇ ಹಣದಲ್ಲಿ ಹಲವರ ಬದುಕು ಕಟ್ಟಬಹುದಿತ್ತು. ಸದಾ ಧನಾತ್ಮಕ ಚಿಂತನೆಯಿಂದ ಬಡತನ ನಿವಾರಣೆ ಸಾಧ್ಯ ಎಂದರು.


ವಿದ್ಯಾರ್ಥಿ ವೇತನ ವಿತರಣೆ ಕಾರ್ಯಕ್ರಮದಲ್ಲಿ ಖಲೀಲ್ ಅಹ್ಮದ್ ಮಾತನಾಡಿದರು.

ವಿದ್ಯಾರ್ಥಿವೇತನ ವಿತರಣೆ ಜತೆಗೆ, ಶೇ.90ಕ್ಕಿಂತ ಹೆಚ್ಚು ಅಂಕ ಪಡೆದಿರುವ ಉಮರ್ ಶರೀಫ್, ಇನಾಮ್ ಶೇಕ್, ಸ್ವಾತಿ, ಜಯಚಂದ್ರ, ಖತೀಜಾ ಸಮ್ರೀನ್, ರೋಶ್ನಿ ಶೆಟ್ಟಿಗಾರ್, ಸಾಜಿದಾ, ಯಶಸ್ವಿನಿ, ಶ್ರದ್ಧಾ ಮೊದಲಾದವರನ್ನು ಹಾಗೂ ಅಂಗವೈಕಲ್ಯ ಮೆಟ್ಟಿನಿಂತು ಬಿಬಿಎಂ ಕಲಿಯುತ್ತಿರುವ ಫಿರೋಝ್, ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಮೆಹಜಬೀನ್ ಅವರನ್ನು ಸನ್ಮಾನಿಸಲಾಯಿತು.

ಶಾಸಕ ಯು.ಟಿ.ಖಾದರ್, ಝಿಯಾವುದ್ದೀನ್ ನಾಯರ್, ಸಯ್ಯದ್ ಬ್ಯಾರಿ, ಮುಹಮ್ಮದ್ ಬದ್ರುದ್ದೀನ್, ವಹೀದಾ ಉಸ್ಮಾನ್, ಕೆ.ಎಂ.ಶರೀಫ್, ಮುಹಮ್ಮದ್ ಹನೀಫ್, ರಶೀದ್ ವಿಟ್ಲ ಮತ್ತಿತರರು ಉಪಸ್ಥಿತರಿದ್ದರು. ಯಾಸಿರ್ ಅಹ್ಮದ್ ಮತ್ತು ಮುಜಾಹಿದ್ ಫಾರೂಖಿ ಕಾರ್ಯಕ್ರಮ ನಿರೂಪಿಸಿದರು.

ವಿಜಯವಾಣಿ
MANGALORE

2 ಸೋಮವಾರ 24 ಡಿಸೆಂಬರ್ 2012

ಮಂಗಳೂರು ಲೋಕಲ್ ಎಕ್ಸ್‌ಪ್ರೆಸ್

ಝಕಾತ್ ಟ್ರಸ್ಟ್‌ನಿಂದ ವಿದ್ಯಾರ್ಥಿ ವೇತನ ವಿತರಣೆ

ಮಂಗಳೂರು: ಕರ್ನಾಟಕ ಝಕಾತ್ ಎಂಡ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ನಗರದಲ್ಲಿ ಸುಮಾರು 2500 ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು.

ಟ್ರಸ್ಟ್ ಅಧ್ಯಕ್ಷ ಖಲೀಲ್ ಅಹ್ಮದ್ ಮಾತನಾಡಿ, ವಿದ್ಯಾರ್ಥಿಗಳು ವರದಕ್ಷಿಣೆ ರಹಿತ ಸರಳ ವಿವಾಹ, ಕೋಮು ಸೌಹಾರ್ದ ಸ್ಥಾಪನೆ ಮೂಲಕ ನೈತಿಕ, ಮಾನವೀಯ ಸಮಾಜ ನಿರ್ಮಾಣದ ಪ್ರತಿಜ್ಞೆ ಮಾಡಬೇಕು ಎಂದು ಕರೆ ಕೊಟ್ಟರು.

ಈ ವರ್ಷ ರಾಜ್ಯದ 13 ಜಿಲ್ಲೆಯ 7000 ವಿದ್ಯಾರ್ಥಿಗಳಿಗೆ 3.5 ಕೋಟಿ ರೂ. ವಿದ್ಯಾರ್ಥಿ ವೇತನ ವಿತರಿಸಲಾಗುತ್ತಿದೆ. ಸರ್ಕಾರಿ ಶಾಲೆಯಲ್ಲಿ ಕಲಿತ ಬಡತನದ ಹಿನ್ನೆಲೆಯ 170 ಮಂದಿ ಶೇ. 90ಕ್ಕಿಂತ ಹೆಚ್ಚು ಅಂಕ ಪಡೆದಿರುವುದು ಹೆಮ್ಮೆಯ ಸಂಗತಿ ಎಂದರು.

ನ್ಯಾ.ಸಾಚಾರ್ ಸಮಿತಿ ಅಧ್ಯಯನ ನಡೆಸಿ ಮುಸ್ಲಿಮರ ಸ್ಥಿತಿ ದಲಿತರಿಂದಲೂ ಕೆಳಮಟ್ಟದಲ್ಲಿದೆ ಎಂದು ವರದಿ ನೀಡಿತ್ತು. ಬಳಿಕ ವರದಿ ಬಗ್ಗೆ ಚರ್ಚೆ- ಸಂವಾದಕ್ಕೆ ಸುಮಾರು 50 ಕೋಟಿ ರೂ. ಖರ್ಚು ಮಾಡಲಾಯಿತು. ಅದೇ ಹಣದಲ್ಲಿ ಹಲವರ ಬದುಕು ಕಟ್ಟಬಹುದಿತ್ತು. ಸದಾ ಧನಾತ್ಮಕ ಚಿಂತನೆಯಿಂದ ಬಡತನ ನಿವಾರಣೆ ಸಾಧ್ಯ ಎಂದರು.



ವಿದ್ಯಾರ್ಥಿ ವೇತನ ವಿತರಣೆ ಕಾರ್ಯಕ್ರಮದಲ್ಲಿ ಖಲೀಲ್ ಅಹ್ಮದ್ ಮಾತನಾಡಿದರು.

ವಿದ್ಯಾರ್ಥಿವೇತನ ವಿತರಣೆ ಜತೆಗೆ, ಶೇ.90ಕ್ಕಿಂತ ಹೆಚ್ಚು ಅಂಕ ಪಡೆದಿರುವ ಉಮರ್ ಶರೀಫ್, ಇನಾಮ್ ಶೇಕ್, ಸ್ವಾತಿ, ಜಯಚಂದ್ರ, ಖತೀಜಾ ಸಮ್ರೀನ್, ರೋಶ್ನಿ ಶೆಟ್ಟಿಗಾರ್, ಸಾಜಿದಾ, ಯಶಸ್ವಿನಿ, ಶ್ರದ್ಧಾ ಮೊದಲಾದವರನ್ನು ಹಾಗೂ ಅಂಗವೈಕಲ್ಯ ಮೆಟ್ಟಿನಿಂತು ಬಿಬಿಎಂ ಕಲಿಯುತ್ತಿರುವ ಫಿರೋಝ್, ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಮೆಹಜಬೀನ್ ಅವರನ್ನು ಸನ್ಮಾನಿಸಲಾಯಿತು.

ಶಾಸಕ ಯು.ಟಿ.ಖಾದರ್, ಝಿಯಾವುದ್ದೀನ್ ನಾಯರ್, ಸಯ್ಯದ್ ಬ್ಯಾರಿ, ಮುಹಮ್ಮದ್ ಬದ್ರುದ್ದೀನ್, ವಹೀದಾ ಉಸ್ಮಾನ್, ಕೆ.ಎಂ.ಶರೀಫ್, ಮುಹಮ್ಮದ್ ಹನೀಫ್, ರಶೀದ್ ವಿಟ್ಲ ಮತ್ತಿತರರು ಉಪಸ್ಥಿತರಿದ್ದರು. ಯಾಸಿರ್ ಅಹ್ಮದ್ ಮತ್ತು ಮುಜಾಹಿದ್ ಫಾರೂಖಿ ಕಾರ್ಯಕ್ರಮ ನಿರೂಪಿಸಿದರು.








## ಕರ್ನಾಟಕ ಝುಕಾತ್ ಆ್ಯಂಡ್ ಚಾರಿಟೆಬಲ್ ಟ್ರಸ್ಟ್‌ನಿಂದ

# 2,500 ಮಂದಿಗೆ ವಿದ್ಯಾರ್ಥಿ ವೇತನ ವಿತರಣೆ



ಮಂಗಳೂರು, ಡಿ.23: ಭಾರತದಲ್ಲಿರುವಷ್ಟು ಸ್ವಾತಂತ್ರ್ಯ ಬೇರಾವ ರಾಷ್ಟ್ರದಲ್ಲೂ ಸಿಗಲು ಸಾಧ್ಯವಿಲ್ಲ. ಅಮೆರಿಕ ಸಹಿತ ಪಾಶ್ಚಿಮಾತ್ಯ ರಾಷ್ಟ್ರಗಳು ಮತ್ತು ಅರಬ್ ದೇಶಗಳನ್ನು ಸಂಚರಿಸಿ ಬಂದಾಗ ಮಾತ್ರ ನಮಗೆ ಅಲ್ಲಿಯ ವಾಸ್ತವ ಸಂಗತಿ ಹಾಗೂ ಇಲ್ಲಿನ ಪ್ರಜಾಪ್ರಭುತ್ವದ ನಿಜಾರ್ಥ ತಿಳಿಯುತ್ತದೆ. ನೆರೆಯ ಪಾಕಿಸ್ತಾನದಲ್ಲಿ ಕೂಡ ಅಲ್ಪಸಂಖ್ಯಾತರ ಸ್ಥಿತಿ ಶೋಚನೀಯವಾಗಿದೆ ಎಂದು ಕರ್ನಾಟಕ ಝುಕಾತ್ ಆ್ಯಂಡ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಖಲೀಲ್ ಅಹ್ಮದ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ಲೊಯೊಲೊ ಹಾಲ್‌ನಲ್ಲಿ ರವಿವಾರ ಕರ್ನಾಟಕ ಝುಕಾತ್ ಆ್ಯಂಡ್ ಚಾರಿಟೆಬಲ್ ಟ್ರಸ್ಟ್ ವತಿ ಯಿಂದ ಉ.ಕ., ದ.ಕ. ಮತ್ತು ಉಡುಪಿ ಜಿಲ್ಲೆಗಳ 2,500 ಮಂದಿಗೆ ವಿದ್ಯಾರ್ಥಿ ವೇತನ ವಿತರಿಸಿ ಅವರು ಮಾತನಾ ಡುತ್ತಿದ್ದರು.

ನ್ಯಾ.ಸಾಚಾರ್ ಸಮಿತಿಯು ಮುಸ್ಲಿಮರ ಸ್ಥಿತಿ ದಲಿತರಿಂದಲೂ ಕೆಳ ಮಟ್ಟದಲ್ಲಿದೆ ಎಂದು ವರದಿ ನೀಡಿತ್ತು. ವರದಿ ಬಗ್ಗೆ ಚರ್ಚೆ-ಸಂವಾದಕ್ಕೆ 50 ಕೋಟಿ ರೂ. ಖರ್ಚು ಮಾಡಲಾಗಿದೆ. ಆದರೆ ಅದೇ ಹಣದಲ್ಲಿ ಹಲವರ ಬದುಕು ಕಟ್ಟಬಹುದಿತ್ತು. ವರದಿ ಬಗ್ಗೆ ಚರ್ಚಿಸುವುದಕ್ಕಿಂತ, ಧನಾತ್ಮಕವಾಗಿ ಚಿಂತಿಸಬೇಕಿದೆ ಎಂದು ಖಲೀಲ್ ಅಹ್ಮದ್ ನುಡಿದರು.

ಸರಕಾರಕ್ಕೆ ದೇಶ ರಕ್ಷಣೆ, ಆರೋಗ್ಯ, ಸಾಮಾಜಿಕ ಭದ್ರತೆ ಸಹಿತ ನೂರಾರು ಕಾರ್ಯಕ್ರಮಗಳ ಅನುಷ್ಠಾನದ ಜವಾಬ್ದಾರಿಯಿರುವಾಗ, ಕನಿಷ್ಠ ಶಿಕ್ಷಣಕ್ಕಾದರೂ ನಾವು ನಮ್ಮಲ್ಲಾಗುವ ನೆರವು ನೀಡಬೇಕು. 18 ವರ್ಷಗಳ ಹಿಂದೆ ಹೈದರಾಬಾದ್‌ನಲ್ಲಿ ಗಿಯಾಸುದ್ದೀನ್ ಬಾಬುಖಾನ್ ನೇತೃತ್ವದಲ್ಲಿ ಸ್ಥಾಪಿಸಿದ ಝುಕಾತ್ ನಿಧಿ ಇಂದು ಲಕ್ಷಾಂತರ ಮಕ್ಕಳ ಶಿಕ್ಷಣಕ್ಕೆ ನೆರವಾಗುತ್ತಿದೆ. ಕರ್ನಾಟಕದಲ್ಲಿ ಕಳೆದ 3 ವರ್ಷಗಳಿಂದ ವಿದ್ಯಾರ್ಥಿ ವೇತನ ನೀಡಲಾಗುತ್ತಿದ್ದು, ಈ ಬಾರಿ ರಾಜ್ಯದ 13 ಜಿಲ್ಲೆಯ ಏಳು ಸಾವಿರ ವಿದ್ಯಾರ್ಥಿಗಳಿಗೆ 3.5 ಕೋಟಿ ರೂ. ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಸರಕಾರಿ ಶಾಲೆಗಳಲ್ಲಿ ಕಲಿತ ಅತ್ಯಂತ ಬಡ ಮಕ್ಕಳಲ್ಲೂ 170 ಮಂದಿ ಶೇ.90ಕ್ಕಿಂತ ಅಧಿಕ ಅಂಕ ಗಳಿಸಿದ್ದಾರೆ. ಈ ಮಕ್ಕಳನ್ನು ದೇಶದ ರತ್ನಗಳು ಎಂದು ಬಣ್ಣಿಸಿದ ಖಲೀಲ್ ಅಹ್ಮದ್, ವಿದ್ಯಾರ್ಥಿಗಳು ವರದಕ್ಷಿಣೆ ರಹಿತ ಸರಳ ವಿವಾಹ, ಕೋಮು ಸೌಹಾರ್ದದ ಮೂಲಕ ನೈತಿಕ, ಮಾನವೀಯ ಸಮಾಜ ನಿರ್ಮಾಣದ ಪ್ರತಿಜ್ಞೆ ಮಾಡಬೇಕು ಎಂದರು.

ಶಾಸಕ ಯು.ಟಿ.ಖಾದರ್, ಬ್ಯಾರಿ ಸಮೂಹ ಸಂಸ್ಥೆಯ ಅಧ್ಯಕ್ಷ ಸೈಯದ್ ಮುಹಮ್ಮದ್ ಬ್ಯಾರಿ, ಕೆಝುಡ್‌ಟಿಸಿಯ ಟ್ರಸ್ಟಿ ಝಿಯಾವುದ್ದೀನ್ ನಾಯರ್, ಅಲ್ ವಫಾ ಚಾರಿಟೆಬಲ್ ಟ್ರಸ್ಟ್‌ನ ಅಧ್ಯಕ್ಷ ಮುಹಮ್ಮದ್ ಬದ್ರುದ್ದೀನ್, ಖಲೀಲ್ ಅಹ್ಮದ್‌ರ ಪತ್ನಿ ವಹೀದಾ, ಕೆ.ಎಂ.ಶರೀಫ್, ಮುಹಮ್ಮದ್ ಹನೀಫ್, ರಶೀದ್ ವಿಟ್ಲ ಮತ್ತಿತರರು ಉಪಸ್ಥಿತರಿದ್ದರು.

**ಸನ್ಮಾನ:** ವಿದ್ಯಾರ್ಥಿ ವೇತನ ವಿತರಣೆ ಜತೆಗೆ, ಶೇ.90ಕ್ಕಿಂತ ಅಧಿಕ ಅಂಕ ಗಳಿಸಿರುವ ಉಮರ್ ಶರೀಫ್, ಇನಾಮ್ ಶೇಕ್, ಸ್ವಾತಿ, ಜಯಚಂದ್ರ, ಖತೀಜಾ ಸಮ್ರೀನ್, ರೋಶ್ನಿ ಶೆಟ್ಟಿಗಾರ್, ಸಾಜಿದಾ, ಯಶಸ್ವಿನಿ, ಶ್ರದ್ಧಾ ಮತ್ತು ಎರಡು ಕೈ ಇಲ್ಲದೆಯೂ ಬಿಬಿಎಂ ಕಲಿಯುತ್ತಿರುವ ಫಿರೋಝ್ ಹಾಗೂ ಎರಡು ಕಾಲು ಇಲ್ಲದೆಯೂ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಮೆಹಜಬೀನ್‌ರನ್ನು ಸನ್ಮಾನಿಸಲಾಯಿತು.

ಯಾಸಿರ್ ಅಹ್ಮದ್ ಮತ್ತು ಮುಜಾಹಿದ್ ಫಾರೂಖಿ ಕಾರ್ಯಕ್ರಮ ನಿರೂಪಿಸಿದರು.

ವಿಜಯ ಕರ್ನಾಟಕ
# ನಮ್ಮ ಕರಾವಳಿ
ಕಡಲ ತಡಿಯ ನಾಡಿ ಮಿಡಿತ
ಸೋಮವಾರ,24 ಡಿಸೆಂಬರ್ 2012, ಮಂಗಳೂರು

# ಭಾರತದಲ್ಲಿ ಹುಟ್ಟಿದ್ದಕ್ಕೆ ಮುಸ್ಲಿಮರು ಹೆಮ್ಮೆ ಪಡಲಿ

## ಮಂಗಳೂರಿನಲ್ಲಿ 2500 ಮಂದಿಗೆ ವಿದ್ಯಾರ್ಥಿ ವೇತನ ವಿತರಣೆ

▪ ವಿಕ ಸುದ್ದಿಲೋಕ ಮಂಗಳೂರು

ಜಾತಿ, ಧರ್ಮ, ಬಣ್ಣದ ತಾರತಮ್ಯವಿಲ್ಲದೇ ಎಲ್ಲರನ್ನೂ ಸಮಾನವಾಗಿ ಕಾಣುವ ಭರತ ಭೂಮಿಯಲ್ಲಿ ಹುಟ್ಟಿರುವ ಬಗ್ಗೆ ಮುಸ್ಲಿಮರು ಹೆಮ್ಮೆ ಪಡಬೇಕು. ಇಲ್ಲಿ ಜನ್ಮ ನೀಡಿದ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಬೇಕು ಎಂದು ಕರ್ನಾಟಕ ಝಕಾತ್ ಆ್ಯಂಡ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಖಲೀಲ್ ಅಹ್ಮದ್ ಹೇಳಿದರು.

ನಗರದ ಲೊಯೊಲಾ ಹಾಲ್‌ನಲ್ಲಿ ಭಾನುವಾರ ಕರ್ನಾಟಕ ಝಕಾತ್ ಆ್ಯಂಡ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸುಮಾರು 2500 ಮಂದಿಗೆ ವಿದ್ಯಾರ್ಥಿವೇತನ ವಿತರಿಸಿ ಅವರು ಮಾತನಾಡಿದರು.

ಭಾರತ ಬಿಟ್ಟು ಬೇರಾವ ರಾಷ್ಟ್ರದಲ್ಲಿ ಹುಟ್ಟಿದ್ದರೂ ಇಂತಹ ಸ್ವಾತಂತ್ರ್ಯ ಸಿಗಲು ಸಾಧ್ಯವಿಲ್ಲ. ಅಮೆರಿಕ ಸೇರಿದಂತೆ ಪಾಶ್ಚಿಮಾತ್ಯ ರಾಷ್ಟ್ರಗಳು, ಅರಬ್ ದೇಶಗಳನ್ನು ಸುತ್ತಿ ಬಂದರೆ ಮಾತ್ರ ನಮಗೆ ಅಲ್ಲಿಯ ವಾಸ್ತವ ಹಾಗೂ ಇಲ್ಲಿಯ ಪ್ರಜಾಪ್ರಭುತ್ವದ ನಿಜಾರ್ಥ ತಿಳಿಯುತ್ತದೆ. ನೆರೆಯ ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ಸ್ಥಿತಿ ಶೋಚನೀಯ ಎಂದು ಅವರು ಹೇಳಿದರು.

ನ್ಯಾ.ಸಾಚಾರ್ ಸಮಿತಿಯು ಮುಸ್ಲಿಮರ ಸ್ಥಿತಿ ದಲಿತರಿಂದಲೂ ಕೆಳಮಟ್ಟದಲ್ಲಿದೆ ಎಂದು ವರದಿ ನೀಡಿತ್ತು. ವರದಿ ಬಗ್ಗೆ ಚರ್ಚೆ-ಸಂವಾದಕ್ಕೆ ಸುಮಾರು 50 ಕೋಟಿ ರೂ. ಖರ್ಚು ಮಾಡಿದ್ದು, ಅದೇ ಹಣದಲ್ಲಿ ಹಲವರ ಬದುಕು ಕಟ್ಟಬಹುದಿತ್ತು. ವರದಿ ಬಗ್ಗೆ ಹಲುಬುತ್ತಾ ಕುಳಿತುಕೊಳ್ಳದೆ, ಧನಾತ್ಮಕವಾಗಿ ಚಿಂತಿಸಬೇಕು. ದೇಶ ನಮಗೆ ಏನು ಕೊಟ್ಟಿದೆ ಎನ್ನುವ ಬದಲು, ದೇಶಕ್ಕೆ ನಾವೇನು ಕೊಟ್ಟಿದ್ದೇವೆ ಎಂಬುದನ್ನು ಆತ್ಮಸಾಕ್ಷಿಯಾಗಿ ಪ್ರಶ್ನಿಸಿಕೊಂಡರೆ, ಬಡತನ ನಿವಾರಣೆ ಕಷ್ಟವಲ್ಲ ಎಂದರು.




ಮಂಗಳೂರಿನಲ್ಲಿ ಭಾನುವಾರ ಕರ್ನಾಟಕ ಝಕಾತ್ ಆ್ಯಂಡ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ವಹೀದಾ ಉಸ್ಮಾನ್ ವಿದ್ಯಾರ್ಥಿವೇತನ ವಿತರಿಸಿದರು. ಟ್ರಸ್ಟ್ ಅಧ್ಯಕ್ಷ ಖಲೀಲ್ ಅಹ್ಮದ್ ಉಪಸ್ಥಿತರಿದ್ದರು.

ಸರಕಾರಕ್ಕೆ ದೇಶ ರಕ್ಷಣೆ, ಆರೋಗ್ಯ, ಸಾಮಾಜಿಕ ಭದ್ರತೆ ಮೊದಲಾದ ಸಾವಿರಾರು ಕಾರ್ಯಕ್ರಮ ಅನುಷ್ಠಾನದ ಜವಾಬ್ದಾರಿ ಇರುವಾಗ, ಕನಿಷ್ಠ ಶಿಕ್ಷಣಕ್ಕಾದರೂ ನಾವು ನಮ್ಮಲ್ಲಿ ಆಗುವ ನೆರವು ನೀಡಬಹುದು. 18 ವರ್ಷದ ಹಿಂದೆ ಹೈದರಾಬಾದ್‌ನಲ್ಲಿ ಗಿಯಾಸುದ್ದೀನ್ ಬಾಬುಖಾನ್ ನೇತೃತ್ವದಲ್ಲಿ ಝಕಾತ್ ನಿಧಿ ಆರಂಭಿಸಿ, ಲಕ್ಷಾಂತರ ಮಕ್ಕಳ ಶಿಕ್ಷಣಕ್ಕೆ ನೆರವು ನೀಡಲಾಗುತ್ತಿದೆ. ಇದೇ ಮಾದರಿಯಲ್ಲಿ ಕರ್ನಾಟಕದಲ್ಲಿ ಮೂರು ವರ್ಷದಿಂದ ವಿದ್ಯಾರ್ಥಿವೇತನ ನೀಡುತ್ತಿದ್ದೇನೆ.

ಈ ಬಾರಿ ರಾಜ್ಯದ 13 ಜಿಲ್ಲೆಯ ಏಳು ಸಾವಿರ ವಿದ್ಯಾರ್ಥಿಗಳಿಗೆ 3.5 ಕೋಟಿ ರೂ. ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಸರಕಾರಿ ಶಾಲೆಯಲ್ಲಿ ಕಲಿತ ಅತ್ಯಂತ ಬಡ ಮಕ್ಕಳಲ್ಲೂ 170 ಮಂದಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದಿರುವುದು ದೇಶದ ರತ್ನಗಳು ಎಂದು ಹೇಳಿದ ಅವರು, ವಿದ್ಯಾರ್ಥಿಗಳು ವರದಕ್ಷಿಣೆ ರಹಿತ ಸರಳ ವಿವಾಹ, ಕೋಮು ಸೌಹಾರ್ದ ಸ್ಥಾಪನೆ ಮೂಲಕ ನೈತಿಕ, ಮಾನವೀಯ ಸಮಾಜ ನಿರ್ಮಾಣದ ಪ್ರತಿಜ್ಞೆ ಮಾಡಬೇಕು ಎಂದರು.

ವಿದ್ಯಾರ್ಥಿವೇತನ ವಿತರಣೆ ಜತೆಗೆ, ಶೇ.90ಕ್ಕಿಂತ ಹೆಚ್ಚು ಅಂಕ ಪಡೆದಿರುವ ಉಮರ್ ಶರೀಫ್, ಇನಾಮ್ ಶೇಕ್, ಸ್ವಾತಿ, ಜಯಚಂದ್ರ, ಖತೀಜಾ ಸಮ್ರೀನ್, ರೋಶ್ನಿ ಶೆಟ್ಟಿಗಾರ್, ಸಾಜಿದಾ, ಯಶಸ್ವಿನಿ, ಶ್ರದ್ಧಾ ಮೊದಲಾದವರನ್ನು ಹಾಗೂ ಎರಡೂ ಕೈ ಇಲ್ಲದೆಯೂ ಬಿಬಿಎಂ ಕಲಿಯುತ್ತಿರುವ ಫಿರೋಝ್, ಎರಡು ಕಾಲು ಇಲ್ಲದೆಯೂ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಮೆಹಜಬೀನ್ ಅವರನ್ನು ಸನ್ಮಾನಿಸಲಾಯಿತು.

ಶಾಸಕ ಯು.ಟಿ.ಖಾದರ್, ಝಿಯಾವುದ್ದೀನ್ ನಾಯರ್, ಸಯ್ಯದ್ ಬ್ಯಾರಿ, ಮುಹಮ್ಮದ್ ಬದ್ರುದ್ದೀನ್, ವಹೀದಾ ಉಸ್ಮಾನ್, ಕೆ.ಎಂ.ಶರೀಫ್, ಮುಹಮ್ಮದ್ ಹನೀಫ್, ರಶೀದ್ ವಿಟ್ಲ ಮತ್ತಿತರರು ಉಪಸ್ಥಿತರಿದ್ದರು. ಯಾಸಿರ್ ಅಹ್ಮದ್ ಮತ್ತು ಮುಜಾಹಿದ್ ಫಾರೂಖಿ ಕಾರ್ಯಕ್ರಮ ನಿರೂಪಿಸಿದರು.